ಇಂಗ್ಲೀಷಿನಲ್ಲಿ ಹೇಳಲಾಗದೇ ಕೇವಲ ಆಪ್ತ ನಗೆಯೊಂದಿಗೆ ಮನಸಿನಲ್ಲೇ ಕೈ ಕೈ ಹಿಚುಕಿಕೊಂಡ. ಅದು ಮಾತ್ರ ಮುಖದಲ್ಲಿ ಕಾಣುತ್ತಿತ್ತು.

ಸರ್ಕಲ್ಲಿನ ನಂತರ ರೆಡ್‌ಓಕ್ ತರದ ಮರದ ಎಲೆಗಳು ಫುಟ್‌ಪಾತ್ ಮೇಲೆ ಹಾಸಿದ್ದರಿಂದ ಜಾರಿಕೊಂಡು ಬೀಳುವ ಹೆದರಿಕೆ ಇದ್ದರೂ ಆಫೀಸಿಗೆ ತಡವಾಗುತ್ತಿದೆ ಎನ್ನುವ ಭಯದಿಂದ ಗುರುಪಾದ ಜೋರಾಗೆ ಹೆಜ್ಜೆಹಾಕುತ್ತಾ ಕಂಪೆನಿ ಸೆಕ್ಯುರಿಟಿಗಳನ್ನೆಲ್ಲಾ ದಾಟಿ ತನ್ನ ಮುಖ ಸ್ಕ್ಯಾನ್ ಮಾಡಿಕೊಂಡು ಒಳ ನಡೆದ. ಆಗಲೇ ಕಂಪೆನಿಯ ಸಾಮೂಹಿಕ ಪ್ರತಿಜ್ಞೆ, ಪ್ರಾರ್ಥನೆಗಳು ನಡೆಯುತ್ತಿದ್ದವು.

ಬೆಳಗಿನ ಪ್ರಾರ್ಥನೆ ಮುಗಿಸಿ ಜನರೆಲ್ಲ ಸಾಲಿನಲ್ಲಿ ತಮ್ಮ ತಮ್ಮ ಡೆಸ್ಕ್, ಕಂಪ್ಯೂಟರ್ ಕಡೆಗೆ ಸಾಗುತ್ತಿದ್ದರೂ ಸೀಯೊನ್ ಮಾತ್ರ ತನ್ನ ಕಡೆಗೆ ಎದುರಾಗುವುದನ್ನು ಗುರುಪಾದ ಗಮನಿಸಿದ. ನಿನ್ನೆಯೇ ಮುಗಿಸಬೇಕಾಗಿದ್ದ ಕೆಲಸ ಆಗಲಿಲ್ಲ, ಇಂದು ಮುಗಿಸುತ್ತೇನೆ ಎಂದು ಈಗ ಹೇಳುತ್ತಾಳೆ ಎಂದುಕೊಂಡು ತನ್ನ ಕಂಪ್ಯೂಟರ್ ಆನ್ ಮಾಡುವ ಪ್ರಕ್ರಿಯೆಯಲ್ಲಿ ಮಗ್ನನಾದ. ತಿರುಗಿ ಅವಳ ಕಡೆ 'ಗುಡ್ ಮಾರ್ನಿಂಗ್' ಎಂದು ಹೇಳುವ ಮೊದಲೇ ಅವಳು 'ನಾನು ಮತ್ತೆ ತಾಯಿಯಾಗುತ್ತಿದ್ದೇನೆ, ಐ ಅಮ್ ಪ್ರೊಡ್ಯೂಸಿಂಗ್ ಮಯ್ ಸೆಕೆಂಡ್ ಚೈಲ್ಡ್' ಎಂದು ಅವನ ಸೆಕ್ರೆಟರಿಗೂ ಕೇಳುವಂತೆ ಒಂದೇ ಉಸುರಿಗೆ ಹೇಳಿಬಿಟ್ಟಳು. ಯಾವತ್ತೂ ಇಂತ ಪರಿಸರದಲ್ಲಿ ಇರದ ಹಾಗೂ ಎಂದೂ ಈ ರೀತಿ ಕೇಳದ ಗುರುಪಾದ ಮಾತ್ರ ಕೇಳಿ ಅಪರಾಧ ಮಾಡಿದಂತೇ ಕುರ್ಚಿಯಲ್ಲಿ ಮುದುಡಿ ಕುಂತು 'ಕೇಳಲು ತುಂಬಾ ಖುಷಿಯಾಗುತ್ತಿದೆ... ಶುಭವಾಗಲಿ' ಎಂದು ಹರಸಿ ಅವಳ ಮುಖವನ್ನೂ ನೋಡದೇ ಕಂಪ್ಯೂಟರ್ ಲಾಗಿನ್‌ಗೆ ತೊಡಗಿದ.

ಮೇಕಿಂಗ್ ಮತ್ತುಪ್ರೊಡ್ಯೂಸಿಂಗ್ ವ್ಯತ್ಯಾಸ ಹಾಳಾಗಲಿ, ಗುರುಪಾದನಿಗೆ ಇಲ್ಲಿ ಏನು ನಡೆಯುತ್ತಿದೆ ಎನ್ನುವುದೇ ಅಂತ್‌ಪಾರಾಗಲಿಲ್ಲ. ಮೊದಲು ಮುಖಕ್ಕೆ ಮುಖ ಮಾಡಿ ನೋಡಲಾಗದೇ ವಿಚಲಿತನಾದ. ಚಿರಂಪತಿ ಮಳೆಯಲ್ಲೂ ಹಣೆ ಬೆನ್ನು ಮತ್ತೆ ಒದ್ದೆಯಾಯಿತು. ಹಾಸ್ಟೆಲಿನಲ್ಲಿ ಊರಿಗೆ ಹೋಗದವರು ನಮಗೆ 'ಹ್ಯಾಪಿ ಜರ್ನಿ' ಎಂದಾಗ ನಾವು ಒಂದಷ್ಟೂ ವಿಚಾರ ಮಾಡದೇ 'ಸೇಮ್ ಟು ಯು' ಎನ್ನುವಂತೆ ಸೀಯೊನಳಿಗೆ 'ಕೇಳಲು ತುಂಬಾ ಖುಷಿ ಯಾಗುತ್ತಿದೆ... ಶುಭವಾಗಲಿ' ಎಂದು ಮೊದಲೇ ಹೇಳಿಬಿಟ್ಟಿದ್ದ. ಕೇವಲ ಒಂದು ವರ್ಷದ ಕಾರ್ಯ ಸಂಬಂಧದಿಂದ ಇಷ್ಟು ಖುಲ್ಲಾ ನಿರ್ಭಿಡೆಯಿಂದ ಹೀಗೆ ಹೇಳಲು ಸಾಧ್ಯವೆ? ಗರ್ಭಿಣಿ ಸಂದರ್ಭದಲ್ಲಿ ಬಳಸುವ ಶಬ್ದ 'ಪ್ಲ್ಯಾನಿಂಗ್' ಮತ್ತು 'ಕ್ಯಾರಿಂಗ್' ಹೋಗಿ ನೇರವಾಗಿ 'ಪ್ರೊಡ್ಯೂಸಿಂಗ್' ಆಗಿದ್ದರ ಪರಿಗೆ ಹೆದರಿದ. ಇವೆಲ್ಲವೂ ಭಾಷೆಯ ಕಷ್ಟವೇ ಹೊರತು ಭಾವನೆಯ ಅಥವಾ 'ಧ್ವನಿ'ಯ ಕಷ್ಟ ಅಥವಾ ಚ್ಯುತಿ ಅಲ್ಲ ಎಂದುಕೊಂಡ. ತನ್ನ ಊರಿನಲ್ಲಿ ಕುಂತ ಅಜ್ಜಿ ಮೊಮ್ಮಗಳ ಮದುವೆಯಾಗಿ ಮೂರುತಿಂಗಳ ಒಳಗೇ ಹಟಮಾಡಿ ಮೊಬೈಲ್‌ನಲ್ಲಿ ನಂಬರು ಒತ್ತಿಸಿಕೊಂಡು ಅವಳ ಹತ್ತಿರ 'ಇನ್ನೂ ತಿಂಗಳ ತಿಂಗಳ ಸ್ನಾನ ಮಾಡುತ್ತಾ ಇದ್ದೀಯಾ' ಎಂದು ಕೇಳಿ ಸಿಟ್ಟು ತರಿಸಿದ್ದು, ಅದಾದ ಮೇಲೆ ಸುಮಾರು ಒಂದು ತಿಂಗಳು ಮೊಮ್ಮಗಳು ಮನೆಯಿಂದ ಬಂದ ಮೊಬೈಲ್ ಕರೆ ಎತ್ತದೇ ಇದ್ದಿದ್ದು, ಕೊನೆಗೂ ಅಜ್ಜಿ ಮತ್ತೆ ಫೋನ್ ಮಾಡಿ 'ದೇವರು ಕೊಟ್ಟಾಗ ನೀನು ತೆಗೆದುಕೋಬೇಕೆ ಹೊರತು ನಮಗೆ ಬೇಕಾದಾಗ ಅವ ಕೊಡೂದನ್ನು ಕಾಯುದಲ್ಲ, ಮತ್ತೆ ಗುಳಿಗೆ ಮಾತ್ರೆ ತೆಕಂಡು ದೇಹ ಹಾಳ ಮಾಡ್ಕಳಡಾ... ಹೆರುಲರು ಶಕ್ತಿ ಬೇಕಲೆ...' ಎಂದು ಮತ್ತೆ ಫೋನ್ ಕುಕ್ಕಿಸಿಕೊಂಡದಕ್ಕೆ 'ನಮಗೆ ಸರಿ ಕಂಡಿದ್ದು ಹೇಳುದಪ' ಎಂದು ಹೇಳಿ ಅಜ್ಜಿ ಸ್ನಾನಕ್ಕೆ ಹೋದದ್ದು ನೆನಪಾಯಿತು. ನನ್ನ ಹೆಂಡತಿ ಕ್ಯಾರಿಂಗ್